ತಾಳಿಕೋಟಿ–ಮೂಕಿಹಾಳ ರಸ್ತೆಯಲ್ಲಿರುವ ಬ್ರಿಡ್ಜ್

631(1338); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತಾಳಿಕೋಟೆ–ಮೂಕಿಹಾಳ ರಸ್ತೆಯಲ್ಲಿರುವ ಬ್ರಿಡ್ಜ್ (ಸೇತುವೆ) ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬ್ರಿಡ್ಜ್‌ಯಿಂದ ಹದಗಟ್ಟಿರುವುದರಿಂದ ಸಾರ್ವಜನಿಕರಿಗೆ ಮತ್ತು ರೈತಾಪಿ ವರ್ಗದವರಿಗೆ ತುಂಬಾ ತೊಂದರೆಯಾಗುತ್ತಿದ್ದು ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಇ) ಹಾಗಿದ್ದಲ್ಲಿ ಎಂದಿನಿಂದ ಈ ರಸ್ತೆಯನ್ನು ಲೋಕೋಪಯೋಗಿ ವ್ಯಾಪ್ತಿಗೆ ಸೇರಿಸಲಾಗುವುದು;

ಈ) ಹಾಗಾದರೆ, ರಸ್ತೆಯಲ್ಲಿರುವ ಬ್ರಿಡ್ಜ್ (ಸೇತುವೆ) ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭ ಮಾಡುವುದು (ಸಂಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು)

ಅ) ಮುದ್ದೇಬಿಹಾಳ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ತಾಳಿಕೋಟಿ–ಮೂಕಿಹಾಳ ರಸ್ತೆಯು 4.00 ಕಿ.ಮೀ. ಉದ್ದವಿದ್ದು ಸುಮಾರು 2.00 ಕಿ.ಮೀ. ಉದ್ದದ ರಸ್ತೆಯನ್ನು ಪ್ರಾಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಅಭಿವೃದ್ಧಿಗೊಳಿಸಲಾಗಿದೆ.

ಈ ರಸ್ತೆಯಲ್ಲಿ ಯಾವುದೇ ಸೇತುವೆ ಇರುವುದಿಲ್ಲ. ಆದರೆ ಸರಪಳಿ 0.060 ಕಿ.ಮೀ. ದಲ್ಲಿ ಕೆಳಮಟ್ಟದ Cause Way ಇದ್ದು ಇದು ಮಳೆಗಾಲದಲ್ಲಿ ಡೋಣಿ ನದಿಯ ಹರಿವು ಹೆಚ್ಚಾದಾಗ ಮುಳುಗಡೆ ಹೊಂದಿ ಸಂಪರ್ಕ ಕಡಿತಗೊಳ್ಳುತ್ತದೆ.

ಈ ಕೆಳಮಟ್ಟದ Cause Way ಯು ಸುಮಾರು 20 ವರ್ಷಗಳಷ್ಟು ಹಿಂದೆ ನಿರ್ಮಿಸಿದ್ದಾಗಿರುತ್ತದೆ.

ಈ Cause Way ಗೆ ಸುಮಾರು 200 ಮೀ. ಸೇತುವೆಯನ್ನು ನಿರ್ಮಿಸಬೇಕಾಗಿದ್ದು, ರೇಖಾ ಅಂದಾಜು ಪ್ರಕಾರ ರೂ. 10.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.

ಆ) ಮತ್ತು ಇ) ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯ ಸಂಹಿತೆಯ ನಿಯಮಗಳನ್ನು ಅನುಸರಿಸಿ ಕ್ರಮ ಕೈಗೊಳ್ಳುವಂತೆ ಸರ್ಕಾರದ ಪತ್ರ ದಿನಾಂಕ:16–7–2014ರಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಸೂಚಿಸಲಾಗಿರುತ್ತದೆ.

ಈ ಸಂಬಂಧ ಬೆಳಗಾವಿ ವೃತ್ತದ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಇಂಜಿನಿಯರ್‌ರವರ ಕಾರ್ಯಾಲಯದಿಂದ ಸದರಿ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಅವಶ್ಯವಿರುವ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ, ಬೆಳಗಾವಿ ವೃತ್ತ ರವರು ಪತ್ರ ಸಂಖ್ಯೆ:ಲೋಇ/ವಿವಿ/ವಿಆರ್/ ಎಂಡಿಆರ್/ಎಎಸ್‌ಓ/14–15, ದಿನಾಂಕ:14–7–2014ರಂದು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉ), ಧಾರವಾಡ ರವರಿಗೆ ಸಲ್ಲಿಸಿರುವುದಾಗಿ ವರದಿಯಾಗಿದೆ.

ಈ) ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಹಸ್ತಾಂತರಿಸುವ ಪ್ರಕ್ರಿಯೆಯು ನಡೆಯುತ್ತಿದ್ದು, ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಗೊಂಡ ನಂತರ ಕಾಮಗಾರಿ ಕೈಗೊಳ್ಳುವ ಬಗ್ಗೆ ಸದರಿ ಇಲಾಖೆಯಿಂದ ನಿರ್ಧಾರ ಕೈಗೊಳ್ಳಬೇಕಾಗುವುದು.

ಜಿಲ್ಲಾ ಪಂಚಾಯತ್ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು

632(21); ಮಾನ್ಯ ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪೂರ)

ಅ) ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ಎಷ್ಟು ಕಿ.ಮೀ ರಸ್ತೆಗಳನ್ನು ಲೋಕೋಪಯೋಗಿ ರಸ್ತೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ; ವಿವರ ನೀಡುವುದು;

ಆ) ಈ ವರ್ಷ ಎಷ್ಟು ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕಾರವಾರ ಹಾಗೂ ಶಿರಸಿ ವಿಭಾಗಗಳು ಬರುತ್ತವೆ. 2006–07 ಹಾಗೂ 2008–09ನೇ ಸಾಲಿನಲ್ಲಿ ಈ ವಿಭಾಗಗಳ ಅಡಿ ಮೇಲ್ದರ್ಜೆಗೇರಿಸಿದ ರಸ್ತೆ ವಿವರಗಳು ಈ ಕೆಳಗಿನಂತಿವೆ:

ವರ್ಷ	ಕಾರವಾರ (ಕಿ.ಮೀ.ಗಳಲ್ಲಿ)	ಶಿರಸಿ (ಕಿ.ಮೀ.ಗಳಲ್ಲಿ)	ಒಟ್ಟು (ಕಿ.ಮೀ.ಗಳಲ್ಲಿ)	ಷರಾ
2006–07	54.90	–	54–90	ವಿವರಗಳನ್ನು ಅನುಬಂಧ–1ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಿದೆ.
2008–09	524.15	1213.96	1738.11	